# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಬಿ.ಡಿ-5120/2013/ಡಿಆರ್‌ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:28-02-2018

***ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ***

ವಿಷಯ: ಶ್ರೀ ಎನ್.ಆರ್. ಮಂಜುನಾಥ ತಂದೆ ರುದ್ರಪ್ಪ, ವಾಸ: ಚಿಕ್ಕಗೊಂಡನಹಳ್ಳಿ ಅಂಚೆ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ ಇವರು ಸಲ್ಲಿಸಿರುವ ದೂರಿನ ಬಗ್ಗೆ.

****

ಈ ದೂರನ್ನು ಶ್ರೀ ಎನ್.ಆರ್. ಮಂಜುನಾಥ ತಂದೆ ರುದ್ರಪ್ಪ, ವಾಸ: ಚಿಕ್ಕಗೊಂಡನಹಳ್ಳಿ ಅಂಚೆ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ **(ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ)** ಇವರು ಶ್ರೀ ರುದ್ರಮುನಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಚಿತ್ರದುರ್ಗ **(ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ)** ರವರ ವಿರುದ್ಧ ದಾಖಲಿಸಿ ಕರ್ನಾಟಕ ಲೋಕಾಯುಕ್ತ ಅಧಿನಿಯಮದಡಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. **ದೂರಿನ ಸಂಕ್ಷಿಪ್ತ ವಿವರ:**

ಚಿಕ್ಕಗೊಂಡನಹಳ್ಳಿ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಅವ್ಯವಹಾರ ಆಗಿದ್ದರೂ ಸಹ ತನಿಖೆಯನ್ನು ಮಾಡಿಲ್ಲ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಚಿತ್ರದುರ್ಗ ಇವರು ದೂರುದಾರರು ಈ ಹಿಂದೆ ಕೊಟ್ಟಿದ್ದ ದೂರಿನ ಮೇಲೆ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಚಿತ್ರದುರ್ಗ ಇವರಿಗೆ ತನಿಖೆ ಮಾಡಿ ವರದಿಯನ್ನು ನೀಡುವಂತೆ ಕೊಟ್ಟಿದ್ದ ನೆನಪೋಲೆ ದಿ: 22-1-2013 ರ ಆಧಾರದ ಮೇರೆಗೆ ಕಾರ್ಯನಿರ್ವಾಹಕ ಅಧಿಕಾರಿಗಳು, ಚಿತ್ರದುರ್ಗ ಇವರಿಗೆ ಯಾವುದಾದರೂ ತನಿಖೆ ಮಾಡಿ ವರದಿಯನ್ನು ಸಲ್ಲಿಸಲಾಗಿದೆಯೇ ಅಂತ ವಿವರಗಳನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು.

3. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಚಿತ್ರದುರ್ಗ ಇವರು ತನಿಖಾ ವರದಿಯನ್ನು ಸಲ್ಲಿಸಿದ್ದು, ಪಂಚಾಯತಿ ನೌಕರರು ಮತ್ತು ಅಂಗನವಾಡಿ ಕಾರ್ಯಕರ್ತೆಯರ, ಗ್ರಾಮ ಪಂಚಾಯತಿ ಸದಸ್ಸರ ಹೆಸರಿಗೆ ಹಣ ಬಿಡುಗಡೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಅಂದಿನ ಗ್ರಾಮ ಪಂಚಾಯತಿಯ ಅಧ್ಯಕ್ಷರಾದ ಶ್ರೀಮತಿ ಗಂಗಮ್ಮ ಮತ್ತು ಪಿ.ಡಿ.ಓ. ಆರ್.ಎಂ.

ಕೃಷ್ಣಮೂರ್ತಿ ಇವರುಗಳು ಈ ಅವ್ಯವಹಾರಗಳನ್ನು ಮಾಡಿರುತ್ತಾರೆ. ಸದರಿ ಆರ್.ಎಂ. ಕೃಷ್ಣಮೂರ್ತಿ ಇವರು ದಿ: 21-1-2013 ರಂದು ಮೃತ ಹೊಂದಿರುತ್ತಾರೆ. ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸಲು ಸಿ.ಇ.ಓ. ಜಿಲ್ಲಾ ಪಂಚಾಯತ್ ಚಿತ್ರದುರ್ಗ ಇವರಿಗೆ ವರದಿಯನ್ನು ಸಲ್ಲಿಸಲಾಗಿದೆ ಅಂತ ತಿಳಿಸಿದ್ದಾರೆ.

4. ಗ್ರಾಮ ಪಂಚಾಯತಿಯ ಜವಾನ ಮಲ್ಲಿಕಾರ್ಜುನ, ಗಣಕಯಂತ್ರ ನಿರ್ವಾಹಕ ಡಿ.ಪಿ. ಚಂದ್ರಪ್ಪ, ನೀರುಗಂಟಿ, ಕೆ.ಎಂ. ನಾಗರಾಜಯ್ಯ, ಗ್ರಾಮ ಪಂಚಾಯತಿ ಸದಸ್ಯ ಆರ್. ನಾಗರಾಜು, ಅಧ್ಯಕ್ಷರಾದ ಕೆ.ಟಿ.ಅಶೋಕ ಕುಮಾರ ಇವರುಗಳ ಹೆಸರಿಗೆ ಹಣ ಬಿಡುಗಡೆಯಾಗಿದ್ದು ಶಾಖಾಧಿಕಾರಿಯಾಗಿದ್ದ ಶ್ರೀ ಕೆ.ಪಿ. ತಿಪ್ಪೇಸ್ವಾಮಿ ಇವರು ನಿಯಮಬಾಹಿರವಾಗಿ ಕಾರ್ಯನಿರ್ವಹಿಸಿರುತ್ತಾರೆ ಅಂತ ವರದಿಯನ್ನು ಸಲ್ಲಿಸಿದ್ದರಿಂದ, ಸಿ.ಇ.ಓ. ಜಿಲ್ಲಾ ಪಂಚಾಯತ್ ಚಿತ್ರದುರ್ಗ ಇವರಿಗೆ ಸದರಿ ವರದಿಯ ಮೇಲೆ ಏನು ಕ್ರಮವನ್ನು ಕೈಗೊಳ್ಳಲಾಗಿದೆ ಎನ್ನುವ ಬಗ್ಗೆ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು.

5. ದಿನಾಂಕ: 2-2-2014 ರಂದು ಸಿ.ಇ.ಓ. ಜಿಲ್ಲಾ ಪಂಚಾಯತ್ ಚಿತ್ರದುರ್ಗ ಇವರು ವರದಿಯನ್ನು ಸಲ್ಲಿಸಿದ್ದು ಮುಖ್ಯ ಲೆಕ್ಕಾಧಿಕಾರಿಗಳ ವಿಶೇಷ ಲೆಕ್ಕ ತಪಾಸಣಾ ವರದಿಯಂತೆ ಸರ್ಕಾರವು ಜಿಲ್ಲಾ ಪಂಚಾಯತ್ ಓಂಬುಡ್ಸ್‌ಮನ್ ಇವರಿಗೆ ಪ್ರಕರಣದ ತನಿಖೆಯನ್ನು ಒಪ್ಪಿಸಿದ್ದಾರೆ. ಓಂಬುಡ್ಸ್‌ಮನ್ ರವರು ಪರಿಶೀಲಿಸಿ ಒಟ್ಟು ರೂ.1,68,14,411/- ಗಳನ್ನು ಗ್ರಾಮ ಪಂಚಾಯತಿ ಅಧ್ಯಕ್ಷರುಗಳು, ಇ.ಓ., ಸಹಾಯಕ ಇಂಜಿನಿಯರ್‌ಗಳು, ಪಿ.ಡಿ.ಓ. ಮತ್ತು ಕಾರ್ಯದರ್ಶಿಗಳಿಂದ ವಸೂಲಿ ಮಾಡುವಂತೆ ಹಾಗೂ ಸದರಿಯವರುಗಳ ವಿರುದ್ಧ ಶಿಸ್ತು ಕ್ರಮವನ್ನು ತೆಗೆದುಕೊಳ್ಳುವಂತೆ ಆದೇಶಿಸಲಾಗಿರುತ್ತದೆ. ಸದರಿ ಅಧಿಕಾರಿ/ ಸಿಬ್ಬಂದಿಗಳಿಗೆ 7 ದಿನ ಸಮಯ ಕೊಟ್ಟು ಆಕ್ಷೇಪಣಾ ಮೊತ್ತಕ್ಕೆ ತಾಳೆಯಾಗುವಂತೆ ಅಗತ್ಯವಾದ ವೋಚರ್, ಬಿಲ್ಸ್ ಹಾಗೂ ಬ್ಯಾಂಕ್ ಶೀಟುಗಳನ್ನು ಒದಗಿಸಲು ಕಾಲಾವಕಾಶವನ್ನು ಕೊಡಲಾಗಿರುತ್ತದೆ. ಈ ಬಗ್ಗೆ ವಿವರಣೆಯನ್ನು ಕೇಳಿ ಮತ್ತು ಕಾರಣ ಕೇಳಿ ನೋಟಿಸ್ ಅನ್ನು ಸಂಬಂಧಪಟ್ಟ ಅಧಿಕಾರಿ/ನೌಕರರುಗಳಿಗೆ ಜಾರಿ ಮಾಡಲಾಗಿರುತ್ತದೆ. ಹಣ ದುರುಪಯೋಗದಲ್ಲಿ ಬಾಗಿಯಾದವರ ವಿರುದ್ಧ ಕಟ್ಟು-ನಿಟ್ಟಿನ ಕ್ರಮವನ್ನು ವಹಿಸಲಾಗುವುದು ಅಂತ ತಿಳಿಸಿದ್ದಾರೆ.

6. ಮೇಲ್ಕಂಡ ಅಧಿಕಾರಿಗಳ ವರದಿಯ ಪ್ರತಿಯನ್ನು ದೂರುದಾರರಿಗೆ ಕಳುಹಿಸಿ ಅವರಿಂದ ಪ್ರತ್ಯುತ್ತರವನ್ನು ಪಡೆಯಲಾಗಿದೆ.

(ಎ) ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನಲ್ಲಿರುವ ಅಂಶಗಳನ್ನೇ ಪುನರುಚ್ಛರಿಸಿದ್ದಾರೆ.

7. ಸಿ.ಇ.ಓ. ಜಿಲ್ಲಾ ಪಂಚಾಯತ್ ಚಿತ್ರದುರ್ಗ ಇವರು ವಿಸ್ತಾರವಾದ ವರದಿಯನ್ನು ಸಲ್ಲಿಸಿದ್ದು, ಪಂಚಾಯತಿ ಅಧಿಕಾರಿಗಳು, ಅಧ್ಯಕ್ಷರು ಮತ್ತು ಪಿ.ಡಿ.ಓ. ರವರುಗಳ ವಿರುದ್ಧ ತೆಗೆದುಕೊಂಡಿರುವ ಕ್ರಮಗಳನ್ನು ತಿಳಿಸುತ್ತಾ ಗ್ರಾಮ ಪಂಚಾಯತಿ ಕರ್ತವ್ಯದಿಂದ ನೀರುಗಂಟಿಯನ್ನು, ಜವಾನರನ್ನು ಮತ್ತು ಗಣಕಯಂತ್ರ ನಿರ್ವಾಹಕರನ್ನು ಕರ್ತವ್ಯದಿಂದ ತೆಗೆದು ಹಾಕಿರುವ ಕುರಿತು ಅಗತ್ಯ ಕ್ರಮ ಜರುಗಿಸುವಂತೆ ಸೂಚಿಸಿದ್ದೇನೆ. ಹಣ ವಸೂಲಾತಿಗೆ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದ್ದೇನೆ ಅಂತ ನಮೂದಿಸಿದ್ದಾರೆ.

8. ಆದರೆ ಸಿ.ಇ.ಓ. ರವರು ಯಾರಿಂದ ಎಷ್ಟು ಮೊತ್ತ ವಸೂಲಿ ಮಾಡಲು ಸೂಚಿಸಿದ್ದಾರೆ ಎನ್ನುವುದು ನಿರ್ದಿಷ್ಟವಾಗಿರಲಿಲ್ಲ ಮತ್ತು ಯಾರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲು ಯಾರಿಗೆ ನಿರ್ದೇಶನವನ್ನು ನೀಡಲಾಗಿದೆ ಎನ್ನುವುದನ್ನು ಸಹ ಸ್ಪಷ್ಟಪಡಿಸಿರಲಿಲ್ಲ. ಆದ್ದರಿಂದ, ದಿನಾಂಕ: 25-2-2015 ರಂದು ಖುದ್ದು ಹಾಜರಾಗಿ ವರದಿಯನ್ನು ಸಲ್ಲಿಸುವಂತೆ ಸಿ.ಇ.ಓ. ರವರಿಗೆ ಸೂಚಿಸಲಾಗಿತ್ತು.

9. ದಿನಾಂಕ: 8-4-2015 ರಂದು ಸಿ.ಇ.ಓ. ಜಿಲ್ಲಾ ಪಂಚಾಯತ್ ಚಿತ್ರದುರ್ಗ ಇವರು ಖುದ್ದು ಹಾಜರಾಗಿ ವರದಿಯನ್ನು ಸಲ್ಲಿಸಿದ್ದಾರೆ. ದಿನಾಂಕ: 4-5-2015 ರ ವರೆಗೆ ವರದಿಯನ್ನು ಸಲ್ಲಿಸಲು ಕಾಲಾವಕಾಶವನ್ನು ಕೋರಿಕೊಂಡಿದ್ದರು. ಆದರೆ ಸಿ.ಇ.ಓ. ರವರು ದಿನಾಂಕ: 24-8-2015 ರವರೆಗೆ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಸದರಿ ದಿನಾಂಕದಂದು ಕೇವಲ ರೂ.39,34,302/- ಆಕ್ಷೇಪಣಾ ಮೊತ್ತವನ್ನು ವಸೂಲಿ ಮಾಡಬೇಕಾಗಿದೆ ಅಂತ ತಿಳಿಸಿದ್ದರಿಂದ, ತಪ್ಪಿತಸ್ಥರ ವಿರುದ್ಧ ಅನುಬಂಧ-1 ರಿಂದ 4 ಅನ್ನು ಇವುಗಳನ್ನು ಕೊಡಲಾಗಿದೆಯೇ ಎನ್ನುವ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಚಿತ್ರದುರ್ಗ ಇವರಿಗೆ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು.

10. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಚಿತ್ರದುರ್ಗ ಇವರು ದಿನಾಂಕ: 6-12-2016 ರಂದು ಖುದ್ದು ಹಾಜರಾಗಿ ವರದಿಯನ್ನು ಸಲ್ಲಿಸಿದ್ದು ಅದರಲ್ಲಿ ವಿಶೇಷ ಲೆಕ್ಕಪತ್ರ ತಪಾಸಣೆಯನ್ನು ಮಾಡಲಾಗಿದೆ, ಸಾಮಾಜಿಕ ಲೆಕ್ಕಪರಿಶೋಧನಾ ನಿರ್ದೇಶನಾಲಯ, ಬೆಂಗಳೂರು ಇವರಿಂದ ವರದಿಯನ್ನು ನಿರೀಕ್ಷಿಸಲಾಗುತ್ತಿದೆ, ವರದಿ ಬಂದ ನಂತರ ಕ್ರಮವನ್ನು ಕೈಗೊಳ್ಳಲಾಗುವುದು ಹಾಗೂ ಚಿಕ್ಕಗೊಂಡನಹಳ್ಳಿಯ ಪಿ.ಡಿ.ಓ. ಆಗಿದ್ದ ಮುಯಿನ್ ಆಸ್ಮಾ, ಬಸವರಾಜು ಗ್ರೇಡ್-2 ಕಾರ್ಯದರ್ಶಿಗಳು, ರೇಣುಕಾ ಪ್ರಸಾದ ಪಿ.ಡಿ.ಓ. ಇವರುಗಳ ವಿರುದ್ಧ ಅನುಬಂದ-1 ಮತ್ತು 2 ರಂತೆ ದೋಷಾರೋಪಣಾ ಪಟ್ಟಿಯನ್ನು ಕೊಡಲಾಗಿದೆ ಅಂತ ತಿಳಿಸಿದ್ದಾರೆ.

11. ಪುನ: ದಿನಾಂಕ: 13-6-2017 ರಂದು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಚಿತ್ರದುರ್ಗ ಇವರು ಖುದ್ದು ಹಾಜರಾಗಿ ಸಾಮಾಜಿಕ ಲೆಕ್ಕ ತಪಾಸಣಾ ವರದಿಯಲ್ಲಿ ಯಾವ ಅಧಿಕಾರಿಯಿಂದ ಆಕ್ಷೇಪಣಾ ಮತ್ತು ವಸೂಲಾತಿ ಮೊತ್ತ ತೆಗೆದುಕೊಳ್ಳಬೇಕಾಗಿದೆ ಎನ್ನುವ ಬಗ್ಗೆ ಮಾಹಿತಿ ಇರುವುದಿಲ್ಲ. ಆದ್ದರಿಂದ, ಸಿ.ಇ.ಓ. ಜಿಲ್ಲಾ ಪಂಚಾಯತ್ ಚಿತ್ರದುರ್ಗ ಇವರಿಗೆ ಪತ್ರವನ್ನು ಬರೆಯಲಾಗಿದೆ ಅಂತ ತಿಳಿಸಿದ್ದಾರೆ.

12. ದಿನಾಂಕ: 31-8-2017 ರಂದು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಚಿತ್ರದುರ್ಗ ಇವರು ಖುದ್ದು ಹಾಜರಾಗಿ ವರದಿಯನ್ನು ಸಲ್ಲಿಸಿದ್ದು, ವಿಶೇಷ ಆಡಿಟ್ ವರದಿಯಲ್ಲಿ ರೂ.1,83,36,138/- ಆಕ್ಷೇಪಣಾ ಮೊತ್ತ ಮತ್ತು ರೂ.94,67,650/- ಗಳ ವಸೂಲಾತಿ ಮೊತ್ತ ಇರುವುದು ಕಂಡುಬಂದಿದೆ. 18 ಜನ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಂದ ಹಣ ವಸೂಲಿ ಆಗಬೇಕಾಗಿದ್ದು 18 ಜನ ನೌಕರರಲ್ಲಿ ಇಬ್ಬರು ಮೃತಪಟ್ಟಿದ್ದಾರೆ, ಉಳಿದ ನೌಕರರು ನೋಟಿಸುಗಳಿಗೆ ತಮ್ಮ ಉತ್ತರವನ್ನು ಕೊಟ್ಟಿರುತ್ತಾರೆ ಅಂತ ತಿಳಿಸಿದ್ದು, ಅದೇ ದಿನ ಹಣ ವಸೂಲಾತಿಗೆ ಇದುವರೆಗೆ ಯಾವುದೇ ಗಂಭೀರವಾದ ಕ್ರಮವನ್ನು ತೆಗೆದುಕೊಂಡಿಲ್ಲ ಅಂತ ಕೇಳಲಾಗಿ, ತುರುವನೂರು ಪೋಲೀಸ್ ಠಾಣೆಗೆ ತಾವು ದೂರನ್ನು ಕೊಟ್ಟರೂ ಸಹ ಯಾವುದೇ ಪ್ರಯೋಜನವಾಗಿಲ್ಲ ಅಂತ ಸದರಿ ಕಾರ್ಯನಿರ್ವಾಹಕ ಅಧಿಕರಿಗಳು ತಿಳಿಸಿದ್ದಾರೆ.

13. ಪಿ.ಎಸ್.ಐ. ತುರುವನೂರು ಪೋಲೀಸ್ ಠಾಣೆ ಮತ್ತು ಗ್ರಾಮಾಂತರ ವೃತ್ತದ ಸಿ.ಪಿ.ಐ. ಇವರುಗಳನ್ನು ಖುದ್ದು ಹಾಜರುಪಡಿಸಿಕೊಂಡಿದ್ದು ಅವರಿಂದ ವಿವರಣೆಯನ್ನು ಕೇಳಲಾಗಿ, ಪಿ.ಎಸ್.ಐ. ರವರು ನಮ್ಮ ಹತ್ತಿರ ಕೊಟ್ಟಿರುವ ದೂರಿನಲ್ಲಿ ಆರೋಪಿಗಳ ಹೆಸರುಗಳನ್ನು ಕೊಟ್ಟಿಲ್ಲ ಮತ್ತು ಮಾಹಿತಿಯನ್ನು ಅಪೂರ್ಣವಾಗಿ ಕೊಟ್ಟಿದ್ದಾರೆ. ಆದ್ದರಿಂದ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಚಿತ್ರದುರ್ಗ ಇವರಿಗೆ ಸ್ಪಷ್ಟವಾದ ಮಾಹಿತಿ ಮತ್ತು ದಾಖಲೆಗಳನ್ನು ಸದರಿ ಪಿ.ಎಸ್.ಐ. ರವರು ಕೇಳಿಕೊಂಡಿದ್ದಾರೆ.

14. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಚಿತ್ರದುರ್ಗ ಇವರು ತುರುವನೂರು ಪೋಲೀಸ್ ಠಾಣಾ ಮೊ.ನಂ:177/2017 ರಂತೆ ಮೊಕದ್ದಮೆಯನ್ನು ದಾಖಲಿಸಿದ್ದು, ಸದರಿ ಮೊಕದ್ದಮೆಯ ಎಫ್.ಐ.ಆರ್. ಪ್ರತಿಯನ್ನು ಸಲ್ಲಿಸಿದ್ದಾರೆ.

15. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ವಿಶೇಷ ಲೆಕ್ಕ ತಪಾಸಣಾ ವರದಿಯ ಪ್ರಕಾರ ರೂ.1,83,36,138/- ಗಳ ಆಕ್ಷೇಪಣಾ ಮೊತ್ತ ಮತ್ತು ರೂ.94,67,650/- ಗಳ ವಸೂಲಾತಿ ಮೊತ್ತವು ಚಿಕ್ಕಗೊಂಡನಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಇನ್ನು ಸಹ ಬಾಕಿ ಇರುತ್ತದೆ.

ಲೆಕ್ಕ ತಪಾಸಣಾ ಅಧಿಕಾರಿಗಳಿಗೆ ಕಾಲ-ಕಾಲಕ್ಕೆ ದಾಖಲೆಗಳನ್ನು ಒದಗಿಸಿ ಅವುಗಳನ್ನು ತೀರುವಳಿ ಮಾಡಿಕೊಳ್ಳಬೇಕಾಗಿರುವುದು ಗ್ರಾಮ ಪಂಚಾಯತಿ ಅಧಿಕಾರಿಗಳ ಕರ್ತವ್ಯವಾಗಿದೆ.

16. ಈ ಪ್ರಕರಣದಲ್ಲಿ 20 ಜನ ಅಧಿಕಾರಿಗಳು/ಸಿಬ್ಬಂದಿಗಳು ಮತ್ತು ಮಾಜಿ ಅಧ್ಯಕ್ಷರುಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ತುರುವನೂರು ಪೋಲೀಸ್ ಠಾಣಾ ಮೊ.ನಂ.177/2017 ರಂತೆ ಕಲಂ 409, 420, 468, 471, 464 ಐ.ಪಿ.ಸಿ. ಅಡಿಯಲ್ಲಿ ದಾಖಲಿಸಿಕೊಳ್ಳಲಾಗಿದೆ. ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಸಾಮಾನ್ಯ ಉದ್ದೇಶ ಅಥವಾ ಸಮಾನ ಉದ್ದೇಶಗಳಿದ್ದವೆ? (Common intention or common object U/s.34 or Sec.149 of IPC) ಎನ್ನುವುದು ತನಿಖೆಯಲ್ಲಿ ಸಾಬೀತಾಗಬೇಕಾದ ಅಂಶಗಳಾಗಿವೆ.

17. ತಪ್ಪಿತಸ್ಥ ಅಧಿಕಾರಿ/ಸಿಬ್ಬಂದಿಗಳ/ಅಧ್ಯಕ್ಷರು/ಸದಸ್ಯರುಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿದ ಮಾತ್ರಕ್ಕೆ ಆಕ್ಷೇಪಣಾ ಮೊತ್ತ ಮತ್ತು ವಸೂಲಾತಿ ಮೊತ್ತಗಳನ್ನು ವಸೂಲಿ ಮಾಡಬೇಕಾದ ಪ್ರಕ್ರಿಯೆಯನ್ನು ನಿಲ್ಲಿಸುವಂತಿಲ್ಲ. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ಕಲಂ 246(6), 246(8) ಮತ್ತು ಕಲಂ 200(4) ಗಳಲ್ಲಿ ಈ ಕೆಳಕಂಡಂತೆ ವಿಧಿಸಲಾಗಿದೆ:

> **Sec.246(6)- On receipt of the audit report, the Grama Panchayat shall either remedy any defects or irregularities which have been pointed out in the report and send to the Executive Officer within three months an intimation of its having done so, or shall within the same period furnish to the Executive Officer any further explanation in regard to such defects or irregularities.**
>
> **Sec.246(8)- The Executive Officer may, after making such enquiry as he may consider necessary disallow any item of expenditure which appears to him to be contrary to law and surcharge the amount thereof on the person making or authorising the illegal payment and after taking the explanations of the person concerned, the Executive Officer may direct by an order in writing that such person shall pay to the Grama Panchayat the amount surcharged along with interest at fifteen percent per annum on the amount due, from the date from which it became due and if the amount is not paid within two months from the date of such order, the Executive Officer shall take steps to recover it as an arrears of land revenue and credit it to the Grama Panchayat Fund.**
>
> **Sec-200(4) If the tax, rate, fee or other amounts for which a notice of demand has been served is not paid within thirty**

**days from the date of such service, the Grama Panchayat may recover the amount due along with a penalty of ten percent of the sum due, by the distraint and sale of the movable property of the defaulter in the prescribed manner.**

18. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ಕಲಂ 246(6), 246(8) ಮತ್ತು ಕಲಂ 200(4) ಗಳಲ್ಲಿ ವಿಧಿಸಿರವ ಕ್ರಮಗಳನ್ನು ಅನುಸರಿಸಿಲ್ಲ. ಈಗಾಗಲೇ ಈ ಪ್ರಕರಣದ ಎದುರುದಾರರು ಕ್ರಿಮಿನಲ್ ಮೊಕದ್ದಮೆಯಲ್ಲಿ 15ನೇ ಆರೋಪಿ ಆಗಿರುತ್ತಾರೆ ಮತ್ತು ಎದುರುದಾರರು ನಿವೃತ್ತರಾಗಿದ್ದಾರೆ ಅಂತ ತಿಳಿದುಬರುತ್ತದೆ.

19. ಆದ್ದರಿಂದ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ಕಲಂ 246(6), 246(8) ಮತ್ತು ಕಲಂ 200(4) ಗಳಲ್ಲಿ ವಿಧಿಸಿರವ ಕ್ರಮಗಳನ್ನು ಅನುಸರಿಸಿ, ವಿಶೇಷ ಲೆಕ್ಕ ತಪಾಸಣಾ ವರದಿಯ ಪ್ರಕಾರ ರೂ.1,83,36,138/- ಗಳ ಆಕ್ಷೇಪಣಾ ಮೊತ್ತ ಮತ್ತು ರೂ.94,67,650/- ಗಳ ವಸೂಲಾತಿ ಮೊತ್ತವನ್ನು ತೀರುವಳಿ ಮಾಡಲು ಎಲ್ಲಾ ಅಗತ್ಯ ಕ್ರಮವನ್ನು ತೆಗೆದುಕೊಳ್ಳುವಂತೆ ಮತ್ತು ಕ್ರಿಮಿನಲ್ ಮೊಕದ್ದಮೆಯ ತನಿಖೆಯಲ್ಲಿ ಸಂಪೂರ್ಣ ಸಹಕಾರವನ್ನು ನೀಡುವಂತೆ ಎದುರುದಾರರ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(1) ಅಡಿಯಲ್ಲಿ ಶಿಪಾರಸ್ಸು ಮಾಡಲಾಗಿದೆ.

20. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 28/2/18

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ